# 4

# ನಮ್ಮ ದೇವರು ಸೃಷ್ಟಿಸುವಾತನು

ಬಲವನ್ನು, ವಿಶೇಷವಾಗಿ ಮಿತಿಯಿಲ್ಲದ ಬಲವನ್ನು ಕುರಿತು ಅದು ಒಂದಿಲ್ಲಾ ಒಂದು ರೀತಿಯಲ್ಲಿ ಪ್ರಕಟಿಸಲ್ಪಟ್ಟದ್ದನ್ನು ಯೋಚಿಸದೇ ವಿಚಾರಿಸಲಾರೆವು. ಬಲವನ್ನು ಪ್ರಾಥಮಿಕವಾಗಿ ಅದರ ಪರಿಣಾಮಗಳಲ್ಲಿ ಗುರುತಿಸುತ್ತೇವೆ. ಉಪಯೋಗಿಸಲ್ಪಟ್ಟ ಬಲವು ಪ್ರಕಟಿಸಲ್ಪಟ್ಟ ಬಲವಾಗಿದೆ. ಮಾನವರು ಬಲದಲ್ಲಿ ಮಿತಿಯುಳ್ಳವರಾಗಿದ್ದರೂ ಕಣ್ಣಿಗೆ ಕಾಣದಿರುವ ಬಲವನ್ನು ಗ್ರಹಿಸಿಕೊಂಡು ಅದನ್ನು ವಿವಿಧ ರೀತಿಯಲ್ಲಿ ಉಪಯೋಗಿಸುತ್ತಾರೆ. ಮಿಂಚಿನಲ್ಲಿ ಕಂಡು ಬಂದ ಶಕ್ತಿಯು ಮನೆಗಳನ್ನೂ ಪಟ್ಟಣಗಳನ್ನೂ ಬೆಳಗಿಸುವಲ್ಲಿ ಉಪಯೋಗಿಸಲ್ಪಟ್ಟಿದೆ. ಪರಮಾಣುವಿನಲ್ಲಿ ಒಳಗೊಂಡಿರುವ ಶಕ್ತಿಯು ಬಹು ಶಕ್ತಿಯ ಅಪರಿಮಿತ ಮೂಲವಾಗಿ ಉಪಯೋಗಿಸಲ್ಪಟ್ಟಿದೆ. ಪೆಟ್ರೋಲಿಯಮ್‌ದ ಶಕ್ತಿಯು ಯಂತ್ರಗಳಲ್ಲಿ ಉಪಯೋಗಿಸಲ್ಪಟ್ಟು ಪ್ರಯಾಣಕ್ಕೆ ಮಾರ್ಪಡಿಸಲ್ಪಟ್ಟಿರುತ್ತದೆ. ಈ ಉದಾಹರಣೆಗಳು ಆಕರ್ಷಿಕವಾದವುಗಳಾಗಿವೆ. ನಮ್ಮ ಜಗತ್ತಿನಲ್ಲಿ ಶಕ್ತಿಯ ಉಪಯೋಗಗಳಿಂದ ನಾವು ಪ್ರಭಾವಿತರಾಗಿರುತ್ತೇವೆ.

ಈ ಉದಾಹರಣೆಗಳು ಈಗಾಗಲೇ ಇರುವ ಶಕ್ತಿಗಳನ್ನು ಉಪಯೋಗಿಸುವದರ ನಿಜವಾದ ಉದಾಹರಣೆಗಳಾಗಿವೆ. ನಮ್ಮ ಜಗತ್ತಿನಲ್ಲಿ ಈಗಾಗಲೇ ಹುದುಗಿಕೊಂಡಿರುವ ಶಕ್ತಿಯನ್ನು ಜನರು ಸಂಶೋಧಿಸುತ್ತಾರೆ, ತೆಗೆದುಕೊಳ್ಳುತ್ತಾರೆ, ನಿಯಂತ್ರಿಸುತ್ತಾರೆ ಹಾಗೂ ವಿನಿಯೋಗಿಸುತ್ತಾರೆ. ಇದು ಸೃಷ್ಟಿಯ ಬಗ್ಗೆ ಹಾಗೂ ನಮ್ಮ ಜಗತ್ತಿನ ಮೂಲಗಳ ಬಗ್ಗೆ ಕೆಲವೊಂದನ್ನು ಸೂಚಿಸುತ್ತದೆ. ಕ್ರಮ ಬದ್ಧವಾದ ರೀತಿಯಲ್ಲಿ ತಡೆಹಿಡಿಯಲ್ಪಟ್ಟ ನಂಬಲಾಗದ ಶಕ್ತಿಯೊಂದಿಗೆ ಅದು ಹೋಲಿಸಲ್ಪಟ್ಟಿದೆ. ನಮ್ಮ ಪ್ರಾಪಂಚಿಕ ಜಗತ್ತನ್ನು ಮಾಡಿರುವ ಪರಮಾಣುಗಳು ಅಕ್ಷರಶ ವಾಗಿ ಶಕ್ತಿಯೊಂದಿಗೆ ತಿರುಗುತ್ತಲಿವೆ. ಅವು ಒಂದು ವೇಳೆ ಒಂದು ರೀತಿಯ ದ್ರವೀಕರಣದಿಂದ ನಿಯಂತ್ರಣ ತಪ್ಪಿಸಿ ಬಿಟ್ಟರೆ ಒಂದು ರೀತಿಯ ಕಲ್ಪಿಸಲಾಗದ ಶಕ್ತಿಯಲ್ಲಿ ಗೊಂದಲ ಉಂಟಾಗುವುದು.

ಇದೆಲ್ಲದಕ್ಕೂ ದೇವರೊಂದಿಗೆ ಯಾವ ಸಂಬಂಧ? ನಮ್ಮ ಮೊದಲನೆಯ ಭಾಗದಲ್ಲಿ "ದೇವರು ಮಿತಿಯಿಲ್ಲದವನು" ಎಂಬುದರಲ್ಲಿ ನಾವು ದೇವರ ಸರ್ವ ವ್ಯಾಪಕತ್ವ, ಸರ್ವಜ್ಞಾನ, ಸರ್ವ ಶಕ್ತಿಯ ಬಗ್ಗೆ ಚರ್ಚಿಸಿದ್ದೇವೆ. ದೇವರು ಸರ್ವಶಕ್ತನಾಗಿರುವುದರಿಂದ ಆತನು ಸೃಷ್ಟಿಸುವ ಶಕ್ತಿಯುಳ್ಳವನಾಗಿದ್ದಾನೆ. ಬಲವು ಕಾರ್ಯದಲ್ಲಿ ಪ್ರದರ್ಶಿಸಲ್ಪಟ್ಟಿರುವುದು. ದೇವರು ಸರ್ವಜ್ಞಾನಿಯಾಗಿರುವದರಿಂದ, ಆತನ ಸೃಷ್ಟಿಯು "ಆತನು ದರ್ಶಿಸಿದಂತೆ" ಇರುತ್ತದೆ. ಅದು ಆತನ ಚಿತ್ತಕ್ಕನುಸಾರವಾಗಿ ಇರುವುದು. ದೇವರು ಯಾವಾಗಲೂ ಇರುವಾತನಾಗಿರುವದರಿಂದ ಆತನು ಅಂತರ್ಗತನಾಗಿದ್ದಾನೆ. ಜಗತ್ತಿನ ತನ್ನ ಸೃಷ್ಟಿಯಲ್ಲಿ ಆತನು ತನ್ನನ್ನು ತೋರಿಸಿಕೊಂಡಿದ್ದಾನೆ. ಹೀಗೆ ಸೃಷ್ಟಿಯಲ್ಲಿ ದೇವರ ಸ್ವಭಾವವನ್ನೇ ನಾವು ನೋಡುತ್ತೇವೆ. ಇದು ಪರಿಶುದ್ಧ ಬರಹಗಳ ನಿಲುವಾಗಿದೆ. "ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿಯನ್ನೂ ಉಂಟು ಮಾಡಿದನು" (ಆದಿಕಾಂಡ 1:1).[1] ಈ ಕಾರಣದಿಂದಲೇ ಕೀರ್ತನೆಗಾರನು, "ನಮ್ಮ ಕರ್ತನಾದ ಯೆಹೋವನೇ, ನಿನ್ನ ನಾಮವು ಭೂಲೋಕದಲ್ಲೆಲ್ಲಾ ಎಷ್ಟೋ ಮಹಿಮೆಯುಳ್ಳದ್ದು ..." ಎಂದು ಹೇಳಿದ್ದಾನೆ (ಕೀರ್ತನೆ 8:1ಬಿ ವ. 9ನ್ನೂ ನೋಡಿರಿ). ದೇವರ ಸೃಷ್ಟಿಯ ಕೈಕೆಲಸದಲ್ಲಿ ಭೂಮಿಯು ಶ್ರೇಷ್ಠವಾದ ಪ್ರದರ್ಶನವಾಗಿದೆ. ಯಾಕೆ? ಸೃಜಿಸಲ್ಪಟ್ಟದ್ದು

ದೇವರ ಸೃಷ್ಟಿಸುವ ಹಾಗೂ ಬಲದ ವಿಶ್ವ ವಿವರಣೆಯಾಗಿದೆ. ಮೊದಲನೆಯ ಭಾಗದಲ್ಲಿ ಆತನ ಸೃಜನಾತ್ಮಕ ಕಾರ್ಯದ ವಿಶಾಲತೆಯನ್ನು ನಾವು ಸಂಕ್ಷೇಪವಾಗಿ ಸೂಚಿಸಿದ್ದೇವೆ. ಇಲ್ಲಿ ನಾವು ದೇವರ ಸೃಷ್ಟಿಯಲ್ಲಿ ಭೂಮಿಯ ಹಾಗೂ ಮನುಷ್ಯನ ಸ್ಥಾನ ಮತ್ತು ಪಾತ್ರದ ಬಗ್ಗೆ ಒತ್ತಿ ಹೇಳುತ್ತೇವೆ.

## ಮಣ್ಣಿನಿಂದ ಮಾಡಲ್ಪಟ್ಟರು

"ಯೆಹೋವ ದೇವರು ನೆಲದ ಮಣ್ಣಿನಿಂದ ಮನುಷ್ಯನನ್ನು ರೂಪಿಸಿ ಅವನ ಮೂಗಿನಲ್ಲಿ ಜೀವಶ್ವಾಸವನ್ನು ಊದಿದನುಃ ಆಗ ಮನುಷ್ಯನು ಬದುಕುವ ಪ್ರಾಣಿಯಾದನು" (ಆದಿಕಾಂಡ 2:7) ಎಂದು ನಮಗೆ ಹೇಳಲ್ಪಟ್ಟಿದೆ. ನಮ್ಮ ದೈಹಿಕ ಭಾಗದ "ರೂಪವು" *ಮಣ್ಣಿನದಾಗಿರುತ್ತದೆ.* ಆದುದರಿಂದ ನಮಗೂ ಮಣ್ಣಿಗೂ ಬಹಳ ಸಾಮ್ಯವಾದದ್ದು ಇರುವುದು. ದೈಹಿಕ ಅಸ್ತಿತ್ವಗಳಾಗಿ ನಾವು ಒಂದೇ ತರದ ಮೂಲಗಳುಳ್ಳವರಾಗಿದ್ದೇವೆ ಹಾಗೂ ಒಂದೇ ತರದಮೂಲ ವಸ್ತುಗಳಿಂದ ಮಾಡಲ್ಪಟ್ಟಿದ್ದೇವೆ. ದೈಹಿಕ ಜೀವಿಗಳಂತೆ ನಾವು ಭೂಮಿಯಿಂದ ಬಂದಿದ್ದೇವೆ, ಭೂಮಿಯಿಂದ ಬೆಳೆಸಲ್ಪಡುತ್ತೇವೆ ಮತ್ತು ಭೂಮಿಗೆ ತಿರುಗಿ ಹೋಗುತ್ತೇವೆ (ಆದಿಕಾಂಡ 1:29ಃ 2:9, 16ಃ 3:17-19). ಆದುದರಿಂದ ದೇವರು ತನ್ನ ಸೃಜನಾತ್ಮಕ ಪ್ರತಿಭೆಯಲ್ಲಿ *ದೈಹಿಕ ಮಾನವ ಜೀವಿಯನ್ನು ತನ್ನ ಪ್ರಾಪಂಚಿಕ ಸೃಷ್ಟಿಯೊಂದಿಗಿನ ಭೂಮಿಯೊಂದಿಗೆ*[2] *ಸಂಬಂಧಿಸಿದ್ದಾನೆಂದು ಹೇಳಬಹುದು.* ಆದುದರಿಂದ ಭೂಮಿಯು ನಾವು ಜೀವಿಸುತ್ತಿರುವ ಸಂಬಂಧದಲ್ಲಿ ಬಂದಿರುವುದು.

ಭೂಮಿಯ ಮೇಲಿನ ಜೀವವು ಕನಿಷ್ಠ ಪಕ್ಷ ನಾಲ್ಕು ವಿಶಿಷ್ಟ ಮಾರ್ಗಗಳಲ್ಲಿ ವರ್ಧಿಸಲ್ಪಟ್ಟಿದೆ. ಮೊದಲನೆಯದಾಗಿ ಮನುಷ್ಯನು ಒಬ್ಬಂಟಿಗನಾಗಿರುವುದು ಅವನಿಗೆ ಒಳ್ಳೆಯದಲ್ಲವೆಂದು ದೇವರು ತಿಳಿದಿದ್ದನು. ಅವನಿಗೆ ಯೋಗ್ಯವಾದ ಸಹಾಯಕಳನ್ನು ಉಂಟುಮಾಡಿದನು. ಪುರುಷನಿಗೂ ಸ್ತ್ರೀಗೂ ಮಧ್ಯದಲ್ಲಿ ನಿಕಟವಾದ ಅನ್ಯೋನ್ಯತೆಯು ಸ್ಥಾಪಿಸಲ್ಪಟ್ಟಿತು. ಎರಡನೆಯದು, ಅವರು ಸೋಮಾರಿಗಳಾಗಿರುವುದು ಅವರಿಗೆ ಒಳ್ಳೆಯದಲ್ಲ ಎಂದು ದೇವರು ತಿಳಿದಿದ್ದನು. ಅವರಿಗೆ ಮಾಡಲು ಕೆಲಸ ಕೊಟ್ಟನು. ಮೂರನೆಯದು, ಇತರ ಜೀವಿಗಳ ಮೇಲೆ ದೊರೆತನ ಕೊಡುವದರಿಂದ ಅವರ ಜೀವಿತಗಳನ್ನು ಬಲಪಡಿಸಿದನು. ನಾಲ್ಕನೆಯದು ಮತ್ತು ಅತೀ ಪ್ರಾಮುಖ್ಯವಾದದ್ದು, ತನ್ನೊಂದಿಗೆ ಅವರಿಗೆ ಅನ್ಯೋನ್ಯತೆಯಿರುವಂತೆ ದೇವರು ಮಾಡಿದನು.[3]

ಎಂಥಾ ಅವಕಾಶ! ಎಂಥಾ ಆನಂದ! ಎಂಥಾ ತತ್ವ! ಇದು ಹೇಗೆ ಸಾಧ್ಯವಾಗಿತ್ತು? ಅದು ಯಾಕೆ ಸಂಭವಿಸಿತು? "ನಮ್ಮೊಂದಿಗೆ ದೇವರ ಸಂಬಂಧ" ಎಂಬ ಮೂರನೆಯ ವಿಭಾಗದಲ್ಲಿ ನಾವು ಈ ವಿಷಯದ ಬಗ್ಗೆ ಹೆಚ್ಚು ವಿವರಗಳನ್ನು ನೋಡುವೆವು. ಹಾಗಿದ್ದರೂ ಈಗ ನಮ್ಮನ್ನು ಸವಾಲು ಮಾಡುವವು ನಮಗೆ ಸಾಕಷ್ಟಕ್ಕಿಂತ ಹೆಚ್ಚಾದದ್ದು ಇರುವುದು.

## ಆತನ ಸ್ವರೂಪದಲ್ಲಿ ಮಾಡಲ್ಪಟ್ಟದ್ದು

"ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದನುಃ ದೇವಸ್ವರೂಪದಲ್ಲಿ ಅವನನ್ನು ಉಂಟುಮಾಡಿದನು: ಅವರನ್ನು ಗಂಡು ಹೆಣ್ಣಾಗಿ ನಿರ್ಮಿಸಿದನು" (ಆದಿಕಾಂಡ 1:27) ಎಂದು ಹೇಳುವಲ್ಲಿ ಬೈಬಲಿನ ದಾಖಲೆಯು ಜಾಗರೂಕತೆಯಿಂದ ಇರುತ್ತದೆ. ದೇವರು "ಅವನ ಮೂಗಿನಲ್ಲಿ ಜೀವಶ್ವಾಸವನ್ನು ಊದಿದನು [*nishmath chayyim*]ಃ ಆಗ ಮನುಷ್ಯನು ಬದುಕುವ ಪ್ರಾಣಿಯಾದನು [*nephesh*]" (ಆದಿಕಾಂಡ 2:7ಬಿ). *Nephesh* ಎಂಬುದು ಅನೇಕ ಸೂಕ್ಷ್ಮ ವ್ಯತ್ಯಾಸಗಳೊಂದಿಗೆ ಇರುವ ಇಬ್ರಿಯ ಪದವಾಗಿದೆ. ಮನುಷ್ಯನನ್ನು ದೇವರು ಸೃಷ್ಟಿಸಿದ್ದು

ಇಲ್ಲಿ ಹಿನ್ನೆಲೆ ಯಾಗಿರುವದರಿಂದ ಅರ್ಥವು "ಜೀವಿಯು, ಪರಿಪೂರ್ಣ ವ್ಯಕ್ತಿ" ಎಂದಾಗಿರುವುದು.[4]

ಆದುದರಿಂದ, ನಾವು ಕೇವಲ "ಭೂಮಿಗೆ ಸಂಬಂಧಪಟ್ಟವರಲ್ಲ" ಎಂಬುದನ್ನು ಕಂಡುಕೊಳ್ಳುತ್ತೇವೆ. ನಾವು "ಸಂಪೂರ್ಣ ಜೀವಿಗಳು," ದೇವರ ಸ್ವರೂಪದಲ್ಲಿ ಮಾಡಲ್ಪಟ್ಟವರು. ದೇವರ ಮೂಲ ಸತ್ವ ಆತ್ಮನು. ಆದುದರಿಂದ ದೇವರಿಗೆ ನಾವು ಹೋಲಿಕೆಯಲ್ಲಿರುವುದು ನಿಶ್ಚವಾಗಿಯೂ ನಮ್ಮ ದೈಹಿಕ ರೂಪದಲ್ಲಿ ಅಲ್ಲ. ದೇವರೊಂದಿಗಿನ ನಮ್ಮ ಹೋಲಿಕೆಯು ಆತ್ಮದಲ್ಲಿಯೇ, ಆದರೆ ಶರೀರದಲ್ಲಿ ಅಲ್ಲ. ದೇವರು ಮನುಷ್ಯನಲ್ಲಿ ಜೀವಶ್ವಾಸವನ್ನು ಊದಿದಾಗ (*nishmath chayyim*), ಅವನು ದೇವರ ಸ್ವಂತ ಮೂಲಸತ್ವದಿಂದ - ಅಂದರೆ ಆತನ ಆತ್ಮನಿಂದ ತುಂಬಿಸಲ್ಪಟ್ಟಿದ್ದಾನೆ.

ಆದಿಕಾಂಡ 1:30ರಲ್ಲಿ ಎಲ್ಲಾ ಪಶು, ಪಕ್ಷಿ ಇತ್ಯಾದಿಗಳಿಗೆ "ಜೀವಶ್ವಾಸ" ಎಂದು ಕರೆಯಲ್ಪಡುವಂಥದ್ದು ಇದೆ. ಭಿನ್ನತೆಯು ವ್ಯಾಪಕತೆಯಲ್ಲಿ ಇಲ್ಲವೇ ಗುಣದಲ್ಲಿ ಇದೆಯೆಂದು ಹೇಳಬಹುದು. "ಮನುಷ್ಯನ ಆತ್ಮವು [*nishmath adam*] ಯೆಹೋವನ ದೀಪವಾಗಿದೆ" (ಜ್ಞಾನೋಕ್ತಿ 20:27) ಎಂದು ಬೈಬಲ್ ಹೇಳುತ್ತದೆ, ಮಾನವ ಜೀವಿ ಗಳು ಜ್ಞಾನೋದಯಕ್ಕೂ, ತೆರೆದಿರುವದಕ್ಕೂ, ಅರುಹುವುಳ್ಳವರಾಗಿರುವದಕ್ಕೂ ಸಾಮಾರ್ಥ್ಯವುಳ್ಳವರಾಗಿದ್ದಾರೆ. ಆದಾಮ ಮತ್ತು ಹವ್ವರು ಯೋಚಿಸುವವರೂ ತಿಳಿದು ಕೊಳ್ಳುವವರೂ ತಮ್ಮ ಬಗ್ಗೆ, ತಮ್ಮ ಸುತ್ತಲಿನ ವಿಷಯಗಳ ಬಗ್ಗೆ ಹಾಗೂ ದೇವರ ಬಗ್ಗೆ ಅರುಹು ಉಳ್ಳವರಾದರು. ಅವರು ಭೂಮಿಯ ವಸ್ತುಗಳಿಂದ ಮಾಡಲ್ಪಟ್ಟವರಾಗಿದ್ದರೂ ಅವರು ದೇವರಿಂದ ವರವಾಗಿ ಪ್ರಸಾದಿಸಲ್ಪಟ್ಟ ಆತ್ಮದಿಂದ ಭೌತಿಕ ಅಸ್ತಿತ್ವಕ್ಕಿಂತ ಹೆಚ್ಚಿನವರಾಗಿ ಮಾಡಲ್ಪಟ್ಟರು.[5] ಇದು ಅವರಿಗೆ ದೇವರೊಂದಿಗೆ ಅರ್ಥಗರ್ಭಿತವಾದ ಸಂಬಂಧ ವಿರುವದನ್ನು ಸಾಧ್ಯವಾಗಿ ಮಾಡಿತು.

ಸೃಷ್ಟಿ ಕರ್ತನ ಹಾಗೂ ಮಾನವ ಜೀವಿಗಳ ಈ ಅನ್ಯೋನ್ಯತೆಯು ನಿಜವಾಗಿಯೂ ಆದರ್ಶವಾದದ್ದು. ಏದೆನ್ ತೋಟವು ಮುಂದುವರಿದಿರುವ ಆಶೀರ್ವಾದಗಳುಳ್ಳ, ನಿರ್ಬಂಧಗಳಿಲ್ಲದ ಜೀವನಕ್ಕೆ ಚೆನ್ನಾಗಿ ಸಿದ್ಧಪಡಿಸಿದ್ದ ಸ್ಥಳವಾಗಿತ್ತು (ಆದಿಕಾಂಡ 2:7, 8). ಈ ಸಂಬಂಧಕ್ಕೆ ಮುಗಿಯಬಾರದ ಸುಖಕ್ಕೆ ಸಾಮರ್ಥ್ಯವುಳ್ಳದ್ದಾಗಿತ್ತು. ಈ ನಿತ್ಯ ಸಂತೋಷ ವನ್ನು "ಸಾಮರ್ಥ್ಯವುಳ್ಳದ್ದಾಗಿತ್ತು" ಎಂದು ಹೇಳುತ್ತೇವೆ ಯಾಕಂದರೆ ಬೈಬಲ್ ಸ್ಕೂಲಿಗೆ ಕ್ರಮವಾಗಿ ಹಾಜರಾಗುತ್ತಿದ್ದ ಪ್ರತಿಯೊಂದು ಮಗುವು ಅಲ್ಲಿ ಭಯಾನಕವಾದದ್ದು ನಡೆಯಿತು ಎಂಬುದನ್ನು ತಿಳಿದಿರುವರು. ಆದಾಮ ಹವ್ವರು ತೋಟದಿಂದ ಹೊರಗೆ ಹಾಕಲ್ಪಟ್ಟರು. ಅವರ ಮೇಲೆ ಮರಣ ದಂಡನೆಯು ವಿಧಿಸಲ್ಪಟ್ಟಿತು. ಶ್ರಮೆಯಿಂದಲೂ ನೋವಿನಿಂದಲೂ ಅವರು ಶಪಿಸಲ್ಪಟ್ಟರು. ಅವರು ತಕ್ಷಣವೇ ದೇವರ ಸಾನ್ನಿಧ್ಯದ ಮಹಿಮೆಯನ್ನು ಅನುಭವಿಸದೇ ಹೋದರು.

ಯಾಕೆ? ತೋಟದಲ್ಲಿ "ಜೀವವೃಕ್ಷ ... ಹಾಗೂ ಒಳ್ಳೆಯದರ ಮತ್ತು ಕೆಟ್ಟದ್ದರ ಅರುಹನ್ನುಂಟು ಮಾಡುವ ಮರಗಳು ಇದ್ದವು" (ಆದಿಕಾಂಡ 2:9ಬಿ). "... ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದುಣಿ ತಿಂದ ದಿನ ಸತ್ತೇ ಹೋಗುವಿರಿ" (ಆದಿಕಾಂಡ 2:17) ಎಂದು ದೇವರು ಹೇಳಿದನು. *ಆ ಮರವನ್ನು* ದೇವರು ತೋಟದಲ್ಲಿ ಯಾಕೆ ಇಟ್ಟನು? ಪುರುಷ ಮತ್ತು ಸ್ತ್ರೀಗೆ "ಜೀವದ ವೃಕ್ಷವನ್ನು" ಒದಗಿಸಿಕೊಟ್ಟು (ಆದಿಕಾಂಡ 2:9) ಅವರೊಂದಿಗೆ ಪರಸ್ಪರ ತೃಪ್ತಿಕರವಾದ ಸಂಬಂಧವನ್ನು ಯಾಕೆ ಮುಂದುವರಿಸಲಿಲ್ಲ?

ಆ ಪ್ರಶ್ನೆಗಳು ವಿಚಿತ್ರವಾಗಿ ಕಂಡು ಬರಬಹುದು. ಹಾಗಿದ್ದರೂ ಜಾಗರೂಕತೆಯ

ವಿಶ್ಲೇಷಣೆ ತೃಪ್ತಿಕರವಾದ ಉತ್ತರಗಳನ್ನು ನಮಗೆ ಕೊಡುವುದು. ವಿಶ್ವದ ವಿಸ್ತಾರದಲ್ಲಿ ಜಗತ್ತಿನ ಕಡೆಗೆ ನಾವು ನೋಡಿದ್ದೇವೆ. ಈ ಜಗತ್ತಿನ ಅದ್ಭುತಗಳನ್ನು ಗಮನಿಸಿದ್ದೇವೆ. ಒಂದೇ ಒಂದು ಜೀವಿಯ ಬಗ್ಗೆ, "ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದನು" ಎಂದು ಹೇಳಿದ್ದು ಮಹತ್ವವುಳ್ಳದ್ದಾಗಿದೆ. ಮಾನವರಿಗೆ ಪ್ರೀತಿಯುಳ್ಳ ಹಿನ್ನೆಲೆಯನ್ನು ದೇವರ ಹೋಲಿಕೆಯನ್ನು ಹಾಗೂ ಅವರೊಂದಿಗೆ ಸಂಪರ್ಕಿಸಲು ದೇವರ ಒಪ್ಪಿಗೆಯನ್ನು ಕೊಟ್ಟಿದ್ದು, ಅವರು ಸೃಷ್ಟಿಸಲ್ಪಟ್ಟಿದ್ದು ದೇವರಿಗಾಗಿ ವಿಶೇಷ ಅರ್ಥಕೊಟ್ಟಿದ್ದನ್ನು ಸೂಚಿಸಿತ್ತು. ಇಲ್ಲಿ ಸೃಜಿಸಲ್ಪಟ್ಟವರು ಸೃಷ್ಟಿಕರ್ತನೊಂದಿಗೆ ಸ್ವ-ಗ್ರಹಿಕೆಯಲ್ಲಿ, ಪ್ರತಿಕ್ರಿಯೆಯ ಸಂಪರ್ಕದಲ್ಲಿ ಭಾಗವಹಿಸಲು ಸಾಮರ್ಥ್ಯವುಳ್ಳವರಾಗಿರುವರು. ದೇವರೊಂದಿಗೆ ತಡೆಯಿಲ್ಲದ, ನೇರವಾದ ಅನ್ಯೋನ್ಯತೆಯನ್ನು ಊಹಿಸಿಕೊಳ್ಳಿರಿ.

## ಆಯ್ಕೆ ಮಾಡಲು ಮಾಡಲ್ಪಟ್ಟರು

ಈ ಸಂಬಂಧಕ್ಕೆ ಅಂತಿಮ ಹಾಗೂ ಸಹಿಸುವ ಮಹತ್ವವಿರುವದಕ್ಕೆ ಅವಶ್ಯವಾದದ್ದೂ ಒಂದೇ ಒಂದು ಸಂಗತಿ. ದೈವ, ಮಾನವರ ಸಂಬಂಧವು ಸ್ವತಂತ್ರ ಆಯ್ಕೆಯ ಕೃತ್ಯದಿಂದ ಪ್ರವೇಶಿಸಲ್ಪಡಬೇಕು. ಅದು ಸ್ವೇಚ್ಛಾ ಚಿತ್ತದ ತೀರ್ಮಾನವಾಗಿರಬೇಕು. ಸ್ವೇಚ್ಛಾ ಚಿತ್ತವು ಬಹಿರಂಗಪಡಿಸಲು, ಅದಕ್ಕೆ ಸ್ವೀಕರಿಸಲು ಇಲ್ಲವೇ ತಿರಸ್ಕರಿಸಲು ಸಾಮರ್ಥ್ಯ ಮತ್ತು ಅವಕಾಶ ಇರಬೇಕು. ದೇವರು ಆದಾಮ ಮತ್ತು ಹವ್ವರಿಗೆ ಸಾಮರ್ಥ್ಯವನ್ನು (ಬುದ್ಧಿಯನ್ನು) ಹಾಗೂ ಅವಕಾಶವನ್ನು (ವೃಕ್ಷವನ್ನು) ಒದಗಿಸಿಕೊಟ್ಟನು. ತನ್ನ ಚಿತ್ತಕ್ಕೆ ವಿಧೇಯರಾಗಲು ಇಲ್ಲವೇ ತಿರಸ್ಕರಿಸಲು ಅವರಿಗೆ ದೇವರು ಸ್ವೇಚ್ಛಾ ಚಿತ್ತವನ್ನು ಕೊಟ್ಟನು. ದೇವರಿಗೂ ಮತ್ತು ಆತನು ಸೃಷ್ಟಿಸಿದ ಮಾನವನಿಗೂ ಮಧ್ಯದಲ್ಲಿ ಕ್ರಿಯೆ ಮತ್ತು ಪ್ರತಿಕ್ರಿಯೆಗಳಿದ್ದರೆ ಅದು ಬೇರೆಯಾಗಿರುತ್ತಿದ್ದಿಲ್ಲ.

ಆದಾಮ ಹವ್ವರು ತಪ್ಪಾದ ಆಯ್ಕೆ ಮಾಡಿದಾಗ, ದೇವರ ಸೃಷ್ಟಿಯು ಪಾಪದಿಂದ, ಬೇರ್ಪಡಿಸುವಿಕೆಯಿಂದ, ಶಾಪದಿಂದ, ನೋವಿನಿಂದ, ಮುಳ್ಳುಗಳಿಂದ, ಕುರೂಪತನದಿಂದ ಹಾಗೂ ಮರಣದಿಂದ ಕೆಡಿಸಲ್ಪಟ್ಟಿತು. ದೇವರ ಅತ್ಯದ್ಭುತಕರವಾದ ಸೃಷ್ಟಿಯ ಕಾರ್ಯ ಸೋತು ಹೋಯಿತೋ? ಇಲ್ಲ, ದೇವರ ಕಾರ್ಯಗಳು ಮುಂದುವರಿಯುತ್ತವೆ, ಆತನು ಸರ್ಪವನ್ನು (ಸೈತಾನನ್ನು) ಪತನಕ್ಕೆ ಉತ್ತೇಜನ ಕೊಟ್ಟದ್ದಕ್ಕಾಗಿ ಶಪಿಸಿದನು ಮತ್ತು ಜಯಶಾಲಿಯಾದಾತನು ಬರೋಣದ ಮುಖಾಂತರ ಪತನವಾದ ಮಾನವರನ್ನು ಪುನರುದ್ಧಾರ ಮಾಡುವದನ್ನು ವಾಗ್ದಾನ ಮಾಡಿದನು:

> ಆಗ ಯೆಹೋವ ದೇವರು ಸರ್ಪಕ್ಕೆ, "ನೀನು ಈ ಕಾರ್ಯವನ್ನು ಮಾಡಿದ್ದರಿಂದ ಎಲ್ಲಾ ಪಶುಗಳಲ್ಲಿಯೂ ಅಡವಿಯ ಎಲ್ಲಾ ಮೃಗಗಳಲ್ಲಿಯೂ ಶಾಪ್ರಗಸ್ತನಾದಿಣಿ ನೀನು ಹೊಟ್ಟೆಯಿಂದ ಹರಿದು ನಿನ್ನ ಜೀವಮಾನದ ದಿನಗಳಲ್ಲೆಲ್ಲಾ ಮಣ್ಣೇ ತಿನ್ನುವಿಣಿ ನಿನಗೂ ಈ ಸ್ತ್ರೀಗೂ, ನಿನ್ನ ಸಂತಾನಕ್ಕೂ ಈ ಸ್ತ್ರೀಯ ಸಂತಾನಕ್ಕೂ ಹಗೆತನವಿರುವ ಹಾಗೆ ಮಾಡುವೆನು. ಈಕೆಯ ಸಂತಾನವು ನಿನ್ನ ತಲೆಯನ್ನು ಜಜ್ಜುವದು, ನೀನು ಅದರ ಹಿಮ್ಮಡಿಯನ್ನು ಕಚ್ಚುವಿ" (ಆದಿಕಾಂಡ 3:14, 15).

---

ಟಿಪ್ಪಣಿಗಳು

[1]ಹೆಚ್ಚಾದ ಎಲ್ಲಾ ವ್ಯಾಖ್ಯಾನಗಳನ್ನೊಳಗೊಂಡ ಬೈಬಲುಗಳು ಈ ವಚನದಲ್ಲಿಯ ಮೊದಲಿನ ಉಪಪದ "ಸಮಸ್ಯೆ"ಯನ್ನು ಟಿಪ್ಪಣಿ ಮಾಡಿವೆಣಿ ಉದಾಹರಣೆ, *Oxford Annotated Bible*, RSV*; Westminister Study Bible*, RSV; *Harper Study Bible*, NRSV. "ಆದಿಯಲ್ಲಿ"

ಎಂಬ ಹೆಚ್ಚು ಸ್ಪಷ್ಟವಾದ ವ್ಯಾಖ್ಯಾನದೊಂದಿಗೆ ತೀರ್ಮಾನಿಸುವ ಪೂರ್ಣ ಚರ್ಚೆಗಾಗಿ ನೋಡಿರಿ John Peter Lange, "Genesis" in *Commentary on the Holy Scriptures: Critical Doctrinal and Homiletical,* trans. and ed. Philip Schaff (Grand Rapids, Mich.: Zondervan, n.d.), 162. [2]ಇದು ಹಿಬ್ರುವಿನಲ್ಲಿ ಮನುಷ್ಯನಿಗಾಗಿ *adam* ಎಂಬ ಪದದಲ್ಲಿ ಹಾಗೂ *damah* ಎಂದು ಭೂಮಿಗಾಗಿ ಇರುವ ಪದದಲ್ಲಿ ಸೂಚಿಸಲ್ಪಟ್ಟಿದೆ. Cf. Francis Brown, S. R. Driver, and Charles A. Briggs, *A Hebrew and English Lexicon of the Old Testament* (Oxford: Clarendon, 1958), 9. [3]ಆದಿಕಾಂಡ 1ಣಿ 2ರಲ್ಲಿಯಂಥ ಸೃಷ್ಟಿಯ ವಿವರಣೆಗಳ ಮೇಲೆ ಗ್ರಂಥಗಳು ಬರೆಯಲ್ಪಟ್ಟಿದೆ. ಎರಡು ಮೂಲಗಳ ಅಭಿಪ್ರಾಯಗಳನ್ನು ಒಳಗೊಂಡು ಜಾಗರೂಕ ವಿಭಜನೆಗಾಗಿ ನೋಡಿರಿ John T. Willis, *Genesis,* The Living Word Commentary (Austin, Tex.: Sweet, 1979), 78-115. ಆದಿಕಾಂಡ 1-3ರ ಬಗ್ಗೆ ಬರೆಯಲ್ಪಟ್ಟದ್ದರಿಂದ ಈ ಅಧ್ಯಾಯಗಳು ಬಹಳ ಕೀಳುತರದ ಕಲ್ಪನಾ ಕಥೆಗಳಾಗಿರುವವೆಂದು ಅನೇಕರು ನಂಬುತ್ತಾರೆ. ಇಂಥ ಬೇರೆ ಸೃಷ್ಟಿ ಕಥೆಗಳಲ್ಲಿಯ ಹೋಲಿಕೆಗಾಗಿ ರುಜುವಾತುಗಳಾಗಿ ತೋರಿಸಲ್ಪಟ್ಟಿವೆ, ಉದಾಹರಣೆ. Akkadian *Enuma Elish* ಇಂತಹ ಸೃಷ್ಟಿಯ ಕಥೆ. ಇದು ಆದಿಕಾಂಡದ ವಿವರಣೆಯ ಬಲೆಯನ್ನು ಕಡಿಮೆ ಮಾಡುತ್ತದೆ (James B. Pritchard. ed. "Akkadian Myths and Epics," in *Ancient Near Eastern Texts Relating to the Old Testament,* trans. E. A. Speiser, 2d ed. [Princeton, N.J.: Princeton University, 1955], 60-62). ಮೊದಲಿನ ಸಮಯದಲ್ಲಿ ಮಕ್ಕಳು ತಮ್ಮ ಕ್ಲಾಸ್‌ರೂಮಿನಲ್ಲಿಯ ಬೋರ್ಡುಗಳ ಮೇಲೆ ಆದಾಮ ಹವ್ವರನ್ನು ಕ್ರೂಡಿಸಿ ಏದೆನ್ ತೋಟದಿಂದ ದೇವರು ಹೊರಗೆ ಓಡಿಸುವದನ್ನು ಚಿತ್ರಿಕರಿಸುತ್ತಿದ್ದರು. ಈವ್ಯಂಗ್ಯಚಿತ್ರಗಳುಮಕ್ಕಳಿಂದಲೂತಂದೆತಾಯಿಗಳಿಂದಲೂಬರುವಂಥದ್ದು ಅಧ್ಯಾಯಗಳ ಕಡೆಗೆ ಒಂದು ರೀತಿಯ ಮನೋಭಾವನೆಯನ್ನು ಪ್ರತಿಬಿಂಬಿಸುತ್ತವೆ. ಪವಿತ್ರ ಪರಿಶುದ್ಧ ಬರಹವನ್ನು ಅಪಹಾಸ್ಯ ಮಾಡುವದಕ್ಕಾಗಿ ಒಂದು ಕಾರಣವು ನಮ್ಮ ಯುಗದ ವೈಜ್ಞಾನಿಕ ಮನೋ ಭಾವನೆಯಲ್ಲಿದೆ. ಸತ್ಯವು ವೈಜ್ಞಾನಿಕವಾದದ್ದು, ಅಕ್ಷರಶ ವಾದದ್ದೂ ಹಾಗೂ ವಾಸ್ತವಿಕ ವಾದದ್ದೂ ಆಗಿರಬೇಕೆಂದು ನಾವು ಭಾವಿಸುತ್ತೇವೆ. ಇಲ್ಲದಿದ್ದರೆ ಅದು ಸತ್ಯವಾದದ್ದಾಗಿರುವದಿಲ್ಲ. ಎಲ್ಲಾ ಪಂಡಿತರು ಹಾಗೆಯೇ ಬೈಬಲ್ ಓದುಗರು, ದೇವರು ತನ್ನ ಬಗ್ಗೆ, ವಿಶ್ವದ ಬಗ್ಗೆ ಮತ್ತು ನಮ್ಮೊಂದಿಗಿನ ಆತನ ಸಂಬಂಧದ ಬಗ್ಗೆ ವೈಜ್ಞಾನಿಕ, ಅಕ್ಷರಶ ಹಾಗೂ ವಾಸ್ತವಿಕವಾದ ಭಾಷೆಯಲ್ಲಿ ಪ್ರತಿಯೊಂದನ್ನು ಹೇಳಿದರೆ ಜ್ಞಾಪಕದಲ್ಲಿಟ್ಟುಕೊಳ್ಳುವರು. ಅದರ ಬಗ್ಗೆ ಬಹಳ ಸ್ವಲ್ಪವನ್ನು ನಾವು ಅರಿತುಕೊಳ್ಳುವೆವು. ಅಗಾಧವಾದ ಸತ್ಯಗಳು ಬಹಳ ಸಲ ಸುಲಭವಾದ ಮಾತುಗಳಲ್ಲಿ ಹೇಳಲ್ಪಟ್ಟಿವೆ. ನಮ್ಮ ಮನಸ್ಸುಗಳನ್ನು ಸಂದಿಗ್ಧ ಪಡುಸುವ ಆದಿಕಾಂಡದಲ್ಲಿಯ ಸೃಷ್ಟಿಯ ಮತ್ತು ಮಾನವನ ಪತನದ ಘಟನೆಗಳು ಬೆಳಕಿಗೆ ಬರುವವು. ನಮ್ಮ ಸ್ವಂತ ತಿಳುವಳಿಕೆಗಾಗಿ ಮತ್ತು ಸುಸ್ಥಿತಿಗಾಗಿ ಆ ಸಂಗತಿಗಳನ್ನು ಸ್ವೀಕರಿಸೋಣ ಮತ್ತು ಮುಂದುವರಿಯೋಣ. [4]ವಿವರವಾದ ವಿರಣೆಗಾಗಿ ನೋಡಿರಿ Brown, Driver, and Briggs, *A Hebrew and English Lexicon,* 659-61. [5]"*Hmhsn (mhsn* ದಿಂದ), ಉಸಿರು, ಆತ್ಮ, ಆತ್ಮನ ಉಸಿರು, ಮನುಷ್ಯನ ಉಸಿರು, ಆತ್ಮನ ಜೀವ, ಇವು *hur*ಕ್ಕಿಂತ ಹೆಚ್ಚು ಖಚಿತವಾಗಿದೆ. *Shon*ಕ್ಕಿಂತ ಹೆಚ್ಚಾಗಿ ವಿಶ್ವವ್ಯಾಪಕವಾಗಿದೆ. ಆದರೆ ಅವುಗಳ ಮಧ್ಯದಲ್ಲಿ ಯಾವುದೇ ನಿಲ್ಲುವಂತೆ ಅವು ಅದಲು ಬದಲು ಮಾಡಲ್ಪಡಬಹುದುಣಿ ಅದಾಗ್ಯೂ ಇದು ಮಾನವರಿಗೆ ಸಂಬಂಧಿಸಿ ಮಾತ್ರ ಇರುವುದು. ಇಲ್ಲಿ ಅದು ದೇವರಿಗು ಮತ್ತು ಮನುಷ್ಯನಿಗೂ - ಇಬ್ಬರಿಗೂ ಸಾಮಾನ್ಯವಾಗಿ ರುವಂಥದ್ದನ್ನು, ದೇವರಿಂದ ಹೊರಟು ಮನುಷ್ಯನೊಳಗೆ ಪ್ರವೇಶಿಸುವದನ್ನು - ದೇವರ ಜೀವನದ ಉಸಿರನ್ನು ಸೂಚಿಸುತ್ತದೆ. ಅಂದರೆ ದೇವರ ಆತ್ಮವು ತನ್ನ ಚಟುವಟಿಕೆಯ ಸ್ವಂತ ಚಲನೆಯಲ್ಲಿ, ಮನುಷ್ಯನಲ್ಲಿ ಅದು ಆತ್ಮಿಕ ತತ್ವವನ್ನು ಕರೆಯುವಂತೆ ಜೀವಿತ ಆತ್ಮವನ್ನು ಕರೆಯುತ್ತದೆ. ಆದರೆ ಅದು ತನ್ನ ನಿಜವಾದ ವ್ಯಕ್ತಿತ್ವದಲ್ಲಿ ಆತ್ಮದಂತಿರುತ್ತದೆ" (Lange, "Genesis," 204).

# ಸೃಷ್ಟಿ ಕರ್ತನು ಇಲ್ಲವೇ ಆಕಸ್ಮಿಕ ಸಂಭವ?

ನೂಯಾರ್ಕ್ ಸ್ಟೇಟ್ ಅಕಾಡೆಮಿ ಆಫ್ ಸೈನ್ಸ್ ಫಿಜಿಸಿಯನ್ ಹಾಗೂ ಹಿಂದಿನ ಪ್ರೆಸಿಡೆಂಟರಾದ ಡಾ. ಎ. ಕ್ರೆಸ್ಸಿ ಮೊರ್ರಿಸನ್ ಅವರು ಹೇಳುವದನ್ನು ಯೋಚಿಸಿರಿ:

> ಪುರಾವೆಯು ಪ್ರತಿಯೊಂದರ ಹಿಂದೆ ಬಲವಾದ ಈ ನಿರ್ದೇಷಿತ ಉದ್ದೇಶದ ಸೂಚಿಸಲ್ಪಡುವಿಕೆಯಾಗಿ ಇರುತ್ತದೆ. ಜಗತ್ತು ಸರಿಯಾದ ಸ್ಥಳದಲ್ಲಿ ಇದೆಯೆಂದು, ಭೂಮಿಯ ಪದರು ಹತ್ತು ಅಡಿಗಳೊಳಗೆ ಹೊಂದಾಣಿಕೆ ಯಾಗಿರುವದೆಂದೂ ಹಾಗೂ ಸಾಗರವು ಕೆಲವು ಅಡಿ ಇನ್ನೂ ಹೆಚ್ಚು ಆಳದಲ್ಲಿದ್ದರೆ ನಮಗೆ ಪ್ರಾಣ ವಾಯುವಾಗಲೀ ಇಲ್ಲವೇ ಸಸ್ಯಗಳ ಬೆಳೆಯುವಿಕೆ ಯಾಗಲೀ ಇರುತ್ತಿರಲಿಲ್ಲವೆಂದು ಕಂಡುಕೊಂಡಿದ್ದಾನೆ: ಭೂಮಿಯು ಇಪ್ಪತ್ನಾಲ್ಕು ಗಂಟೆಯೂ ತಿರುಗುತ್ತಿರುವುದು. ಈ ತಿರುಗುವಿಕೆಯು ತಡವಾದರೆ ಜೀವವು ಅಸಾಧ್ಯವಾಗುತ್ತದೆಂದು ಕಂಡು ಕೊಂಡಿದ್ದೇವೆ. ಸೂರ್ಯನ ಸುತ್ತಲೂ ಪೃಥ್ವಿಯು ತಿರುಗುವುದು ಹೆಚ್ಚಾದರೆ ಇಲ್ಲವೇ ಕಡಿಮೆಯಾದರೆ ಜೀವದ ಚರಿತ್ರೆಯು, ಯಾವುದಾದರೂ ಇದ್ದರೆ, ಸಂಪೂರ್ಣವಾಗಿ ಛಿನ್ನವಾಗುವುದು. ನಮ್ಮ ರೀತಿಯ ಜೀವಕ್ಕೆ ಭೂಮಿಯ ಮೇಲೆ ಸಾಧ್ಯವಾಗುವಂತೆ ಮಾಡುವಂಥ ಸಾವಿರಾರುಗಳಲ್ಲಿ ಸೂರ್ಯ ಒಂದಾಗಿದೆ ಅದರ ಅಳತೆ, ಸಾಂದ್ರತೆ, ಉಷ್ಣತೆ ಹಾಗೂ ಅದರ ಕಿರಣಗಳ ಲಕ್ಷಣ ಎಲ್ಲವೂ ಸರಿಯಾಗಿರತಕ್ಕದ್ದು ಹಾಗೂ ಸರಿಯಾಗಿವೆ ಎಂದು ಕಂಡುಕೊಂಡಿದ್ದೇವೆಣೆ ವಾಯುಮಂಡಲದ ಅನಿಲಗಳು ಒಂದಕ್ಕೊಂದು ಹೊಂದಿಕೊಂಡಿರುತ್ತವೆಣೆ ಸ್ವಲ್ಪ ವ್ಯತ್ಯಾಸವಾದರೂ ಮರಣಾಂತಕವಾಗುತ್ತದೆ ಎಂಬುದನ್ನು ಕಂಡುಕೊಂಡಿದ್ದೇವೆ.
>
> ಪೃಥ್ವಿಯ ಅಳತೆಯನ್ನೂ ಅಂತರಿಕ್ಷದಲ್ಲಿ ಅದರ ಸ್ಥಳವನ್ನೂ ಹೊಂದಾಣಿಕೆಗಳನ್ನು ಯೋಚಿಸುವಾಗ ಈ ಹೊಂದಾಣಿಕೆಗಳಲ್ಲಿ ಸಂಭವಿಸುವುದು ಮಿಲಿಯಕ್ಕೆ ಒಂದರ ಕ್ರಮದಲ್ಲಿ ಇರುತ್ತದೆ. ಎಲ್ಲವುಗಳೂ ಸಂಭವಿಸುವ ಅವಕಾಶಗಳು ಬಿಲಿಯನ್ ಸಂಖ್ಯೆಯಲ್ಲಿಯೂ ಲೆಕ್ಕ ಹಾಕಲಿಕ್ಕೆ ಸಾಧ್ಯವಾಗುವದಿಲ್ಲ. ಆದುದರಿಂದ ಈ ಘಟನೆಗಳನ್ನು ಅನಿರೀಕ್ಷಿತ ಸಂಭವಗಳ ಯಾವುದೇ ನಿಯಮದೊಂದಿಗೆ ಹೊಂದಾಣಿಕೆ ಮಾಡಲಾಗುವದಿಲ್ಲ. ಹೀಗಿರುವ ದರಿಂದ ಮನುಷ್ಯನು ನಿಸರ್ಗಕ್ಕೆ ಹೊಂದಿಕೊಳ್ಳುವಂಥದ್ದು ಹೆಚ್ಚು ಆಶ್ಚರ್ಯಕರವಾದ ದ್ದಾಗಿರುವುದೆಂಬ ತೀರ್ಮಾನವನ್ನು ತಪ್ಪಿಸಿಕೊಳ್ಳುವುದು ಅಸಾಧ್ಯವಾಗುತ್ತದೆ. ಸೃಷ್ಟಿಯ ಈ ಎಲ್ಲಾ ಅದ್ಭುತಗಳ ಪರಿಶೀಲನೆಯು ಅವೆಲ್ಲವುಗಳಲ್ಲಿಯ ಪೂರ್ವಸಂಕಲ್ಪಿಪಿತ ನಕ್ಷೆ ಹಾಗೂ ಉದ್ದೇಶ ಇದೆಯೆಂಬುದನ್ನು ಪ್ರಶ್ನೆಗಳಿಲ್ಲದೇ ಪ್ರದರ್ಶಿಸುತ್ತದೆ. ನಾವು ದೇವರೆಂದು ಕರೆಯುವ ಪರಮ ಶ್ರೇಷ್ಠ ಜೀವಿಯಿಂದ ಒಂದು ಕಾರ್ಯಕ್ರಮವು ಅದರ ಮಿತಿಯಿಲ್ಲದ ವಿವರಗಳೊಂದಿಗೆ ಕೈಕೊಳ್ಳಲ್ಪಟ್ಟಿದೆ.[1]

---

ಟಿಪ್ಪಣಿಗಳು

[1]A Cressy Morrison, *Man Does Not Stand Alone* (New York: Fleming H. Revell Co., 1944). 94, 95; quoted in Batsell Barrett Baxter, *I Believe Because* ... (Grand Rapids, Mich.: Baker Book House, 1971), 66.